ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 890 (93)
2. ಸದಸ್ಯರ ಹೆಸರು : ಶ್ರೀ ಯು.ಬಿ.ವೆಂಕಟೇಶ್ (ನಾಮ ನಿರ್ದೇಶನ ಹೊಂದಿದವರು)
3. ಉತ್ತರಿಸಬೇಕಾದ ದಿನಾಂಕ : 21/12/2021
4. ಉತ್ತರಿಸುವವರು : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು

ಸಂಖ್ಯೆ	ಪ್ರಶ್ನೆ	ಉತ್ತರ
(ಅ)	ಕೇಂದ್ರ ಸರ್ಕಾರದ ಮೇಕ್ ಇನ್ ಇಂಡಿಯಾ ಕಾರ್ಯಕ್ರಮದ ಅಡಿಯಲ್ಲಿ ಪ್ರಾರಂಭಿಸಲಾದ ಕಾರ್ಯಕ್ರಮಗಳು/ಯೋಜನೆಗಳ ಸಂಖ್ಯೆ ಎಷ್ಟು; ಕಳೆದ ಮೂರು ವರ್ಷಗಳಲ್ಲಿ ಈ ಕಾರ್ಯಕ್ರಮಗಳು/ ಯೋಜನೆಗಳಿಗೆ ನಿಗಧಿಪಡಿಸಿದ/ ಬಳಸಲಾದ ಮೊತ್ತವೆಷ್ಟು;	"ಮೇಕ್ ಇನ್ ಇಂಡಿಯಾ" ಕಾರ್ಯಕ್ರಮವು ಕೇಂದ್ರ ಸರ್ಕಾರದ ಯೋಜನೆಯಾಗಿದ್ದು, ಹೂಡಿಕೆಯನ್ನು ಸುಗಮಗೊಳಿಸಲು, ನಾವೀನ್ಯತೆಯನ್ನು ಪೋಷಿಸಲು, ಕೌಶಲ್ಯ ಅಭಿವೃದ್ಧಿಯನ್ನು ಹೆಚ್ಚಿಸಲು ಮತ್ತು ಅತ್ಯುತ್ತಮ ದರ್ಜೆಯ ಉತ್ಪಾದನಾ ಮೂಲಸೌಕರ್ಯವನ್ನು ನಿರ್ಮಿಸುವ ಯೋಜನೆಯಾಗಿರುತ್ತದೆ. ಈ ಯೋಜನೆಗೆ ಪೂರಕವಾಗಿ ಕರ್ನಾಟಕದಲ್ಲಿ ಬಂಡವಾಳ ಹೂಡಿಕೆಯನ್ನು ಆಕರ್ಷಿಸಿ, ಸುಗಮಗೊಳಿಸಲು ಕೆಳಕಂಡ ಕಾರ್ಯಕ್ರಮಗಳನ್ನು ಪ್ರಾರಂಭಿಸಲಾಗಿದೆ: ❖ ಜಮೀನು ಪಡೆಯುವುದನ್ನು ಅನುಕೂಲಗೊಳಿಸಲು ಕರ್ನಾಟಕ ಭೂ ಸುಧಾರಣಾ ಕಾಯ್ದೆ 1961ರ ಸೆಕ್ಷನ್ 109ಕ್ಕೆ ತಿದ್ದುಪಡಿ ತರಲಾಗಿದೆ; ❖ ರಾತ್ರಿ ಪಾಳಿಯಲ್ಲಿ ಅಂದರೆ ರಾತ್ರಿ 7 ರಿಂದ ಬೆಳಿಗ್ಗೆ 6 ಗಂಟೆಯವರೆಗೆ ಕಾರ್ಯನಿರ್ವಹಿಸಲು ಮುಂದೆ ಬರುವ ಮಹಿಳಾ ಕಾರ್ಮಿಕರಿಗೆ ಅನುಕೂಲ ಮಾಡಲು ಫ್ಯಾಕ್ಟರೀಸ್ ಕಾಯ್ದೆ 1948ರಡಿ ತಿದ್ದುಪಡಿ ತರಲಾಗಿದೆ. ❖ ಒಂದು ತ್ರೈಮಾಸಿಕದಲ್ಲಿ ಒಟ್ಟು 125 ಗಂಟೆಗಳವರೆಗೆ ಹೆಚ್ಚುವರಿಯಾಗಿ ಕಾರ್ಯನಿರ್ವಹಿಸಲು ಫ್ಯಾಕ್ಟರೀಸ್ ಕಾಯ್ದೆ, 1948ರಡಿ ತಿದ್ದುಪಡಿ ತರಲಾಗಿದೆ; ❖ ಫಿಕ್ಸ್ಡ್ ಟರ್ಮ್ ಎಂಪ್ಲಾಯ್‌ಮೆಂಟ್ (ಎಫ್.ಟಿ.ಇ.) / ಕಾಂಟ್ರ್ಯಾಕ್ಟ್ ಎಂಪ್ಲಾಯ್‌ಮೆಂಟ್‌ಗಳ ಬಗ್ಗೆ ಅವಶ್ಯ ತಿದ್ದುಪಡಿಗಳನ್ನು ಕರ್ನಾಟಕ ಇಂಡಸ್ಟ್ರೀಯಲ್ ಎಂಪ್ಲಾಯ್‌ಮೆಂಟ್ (ಸ್ಟ್ಯಾಂಡಿಂಗ್ ಆರ್ಡರ್) ಆಕ್ಟ್, 1946 ರಡಿ ತರಲಾಗಿದೆ. ❖ ಕಾಲಕ್ಕನುಗುಣವಾಗಿ ಕನಿಷ್ಠ ವೇತನ ಪರಿಷ್ಕರಣೆಯನ್ನು ಕನಿಷ್ಟ ವೇತನ ಕಾಯ್ದೆಯಡಿ ನಿಗಧಿಪಡಿಸಲಾಗುವುದು ಮತ್ತು ಹಣದುಬ್ಬರ & ಗ್ರಾಹಕ ಬೆಲೆ ಸೂಚ್ಯಂಕ (ಸಿಪಿಐ)ರ ಅಂಶಗಳಿಗೂ ಸಹ ಲಿಂಕ್ ಆಗಿರುತ್ತದೆ.

		❖ ಸರಕು ರಫ್ತು ಉತ್ತೇಜಿಸಲು, ಕರ್ನಾಟಕ ಇಂಡಸ್ಟ್ರೀಯಲ್ ಎಂಪ್ಲಾಯ್‌ಮೆಂಟ್ (ಸ್ಟ್ಯಾಂಡಿಂಗ್ ಆರ್ಡರ್) ಆಕ್ಟ್, 1946 ರಡಿ ಐಟಿ ಮತ್ತು ಐಟಿಇಎಸ್ ಎಸ್ಟ್ಯಾಬ್ಲಿಷ್‌ಮೆಂಟ್‌ಗಳಿಗೆ ಅವಕಾಶವಿರುವಂತೆ ಇದೇ ವಿನಾಯಿತಿಯನ್ನು ಮ್ಯಾನುಫ್ಯಾಕ್ಚರಿಂಗ್ ಎಸ್.ಇ.ಜೆಡ್.ಗಳಿಗೂ ವಿಸ್ತರಿಸಲಾಗಿದೆ. ❖ ಎಸ್.ಹೆಚ್.ಎಲ್.ಸಿ.ಸಿ. / ಎಸ್.ಎಲ್.ಎಸ್.ಡಬ್ಲ್ಯೂ.ಸಿ.ಸಿ./ ಡಿ.ಎಲ್.ಎಸ್.ಡಬ್ಲ್ಯೂ.ಸಿ.ಸಿ.ಯಿಂದ ಅನುಮೋದನೆ ಪಡೆದ ನಂತರ ಉತ್ಪಾದನಾ ಕೈಗಾರಿಕೆಗಳು / ಉದ್ಯಮಗಳ ಸ್ಥಾಪನೆಗೆ ಅನುಕೂಲವಾಗುವಂತೆ, ಉದ್ಯಮಗಳಿಗೆ ಸ್ವೀಕೃತಿ ಪ್ರಮಾಣಪತ್ರಗಳನ್ನು ನೀಡಲಾಗುವುದು. ಈ ಪ್ರಮಾಣಪತ್ರವು ವಿವಿಧ ಕೆಳಹಂತದ ಇಲಾಖೆಗಳಿಂದ ಪಡೆಯುವ ಪರವಾನಗಿ / ಅನುಮೋದನೆಗಳಿಗೆ ಮೂರು ವರ್ಷಗಳ ಆರಂಭಿಕ ಅವಧಿಗೆ ಅಥವಾ ವಾಣಿಜ್ಯ ಕಾರ್ಯಾಚರಣೆಗಳು ಪ್ರಾರಂಭವಾದ ದಿನಾಂಕದಿಂದ ಯಾವುದು ಮೊದಲೋ ಅಲ್ಲಿಯವರೆಗೆ ವಿನಾಯಿತಿಯನ್ನು ನೀಡಿದೆ. ❖ ಅತ್ಯುತ್ತಮ ದರ್ಜೆಯ ಉತ್ಪಾದನಾ ಮೂಲಸೌಕರ್ಯವನ್ನು ನಿರ್ಮಿಸುವ ಸಲುವಾಗಿ ಚೆನ್ನೈ-ಬೆಂಗಳೂರು ಕೈಗಾರಿಕಾ ಕಾರಿಡಾರ್, ಬೆಂಗಳೂರು-ಮುಂಬೈ ಆರ್ಥಿಕ ಕಾರಿಡಾರ್ ಹಾಗೂ ಬೆಂಗಳೂರು-ಹೈದರಾಬಾದ್ ಕಾರಿಡಾರ್‌ಗಳಡಿ ಭಾರತ ಸರ್ಕಾರದ ಸಹಯೋಗದೊಂದಿಗೆ ಕೈಗಾರಿಕಾ ನೋಡ್‌ಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ. ಕ್ರಮವಾಗಿ ತುಮಕೂರಿನ ವಸಂತನರಸಾಪುರದ ಸುಮಾರು 9,600 ಎಕರೆ ಜಮೀನಿನಲ್ಲಿ, ಧಾರವಾಡದ ಸುಮಾರು 6,000 ಎಕರೆ ಜಮೀನಿನಲ್ಲಿ ಹಾಗೂ ಕಡೆಚೂರು ಯಾದಗಿರಿಯ ಸುಮಾರು 3,000 ಎಕರೆ ಜಮೀನಿನಲ್ಲಿ ಕೈಗಾರಿಕಾ ನೋಡ್‌ಗಳನ್ನು ಸ್ಥಾಪಿಸಲು ಕ್ರಮ ಕೈಗೊಳ್ಳಲಾಗಿದೆ; ❖ ಅಲ್ಲದೇ, ಉತ್ತಮ ಉತ್ಪಾದನಾ ಮೂಲಸೌಕರ್ಯವನ್ನು ನಿರ್ಮಿಸುವ ಸಲುವಾಗಿ ಕೆಐಎಡಿಬಿಯು ಪ್ರತಿ ಜಿಲ್ಲೆಯಲ್ಲೂ ಕೈಗಾರಿಕಾ ಪ್ರದೇಶಗಳನ್ನು ಅಭಿವೃದ್ಧಿಪಡಿಸಲು ಕ್ರಮ ಕೈಗೊಳ್ಳುತ್ತಿದೆ. ❖ ರಾಜ್ಯದಲ್ಲಿ ಕೈಗಾರಿಕಾ ಬಂಡವಾಳ ಹೂಡಿಕೆಯನ್ನು ಆಕರ್ಷಿಸಲು, ಹೊಸ ಕೈಗಾರಿಕಾ ನೀತಿ 2020-25ನ್ನು ಹೊರತಂದಿದ್ದು, ಭಾರತ ಸರ್ಕಾರದಂತೆ ತೆರಿಗೆ ಆಧಾರಿತ ಪ್ರೋತ್ಸಾಹಗಳ ಬದಲಾಗಿ ಉತ್ಪಾದನಾ ಆಧಾರಿತ ಕಾರ್ಯಕ್ಷಮತೆಯನ್ನು ಉತ್ತೇಜಿಸಲು ವಾರ್ಷಿಕ ವಹಿವಾಟಿನ ಮೇಲೆ ಪ್ರೋತ್ಸಾಹಗಳನ್ನು ನೀಡಲಾಗುತ್ತಿದೆ.

<table>
<tr>
<td></td>
<td></td>
<td>

❖ ರಾಜ್ಯದಲ್ಲಿ 2018–19 ರಿಂದ 2020–21ರವರೆಗೆ ನೋಂದಣಿಯಾಗಿರುವ ಸೂಕ್ಷ್ಮ ಸಣ್ಣ, ಮತ್ತು ಮಧ್ಯಮ ಕೈಗಾರಿಕೆಗಳು ವಿವರಗಳು ಈ ಕೆಳಕಂಡಂತೆ ಇರುತ್ತದೆ.

(ರೂ. ಕೋಟಿಗಳಲ್ಲಿ)

<table>
<tr><th>ವರ್ಷ</th><th>ಘಟಕಗಳು</th><th>ಬಂಡವಾಳ</th><th>ಉದ್ಯೋಗ</th></tr>
<tr><td>2018–19</td><td>69278</td><td>14877</td><td>582943</td></tr>
<tr><td>2019–20</td><td>97232</td><td>18598</td><td>702325</td></tr>
<tr><td>2020–21 (ಜೂನ್–20 ಅಂತ್ಯದವರೆಗೆ)</td><td>82227</td><td>18085</td><td>542890</td></tr>
</table>

❖ ರಾಜ್ಯದಲ್ಲಿ ಕಳೆದ 3 ವರ್ಷಗಳಿಂದ ಇಲ್ಲಿಯವರೆಗೆ ರಾಜ್ಯ ಉನ್ನತ ಮಟ್ಟದ ಒಪ್ಪಿಗೆ ನೀಡಿಕೆ ಸಮಿತಿ ಹಾಗೂ ರಾಜ್ಯಮಟ್ಟದ ಏಕಗವಾಕ್ಷಿ ಅನುಮೋದನಾ ಸಮಿತಿ ಸಭೆಗಳಲ್ಲಿ ಒಟ್ಟು 826 ಯೋಜನೆಗಳಿಗೆ ಅನುಮೋದನೆ ನೀಡಲಾಗಿದೆ. ಇವುಗಳಿಂದ ರೂ. **114250.9** ಕೋಟಿ ಬಂಡವಾಳ ಹೂಡಿಕೆಯಾಗಲಿದ್ದು, ಒಟ್ಟು **288970** ಜನರಿಗೆ ಉದ್ಯೋಗ ಸೃಜನೆಯಾಗಲಿದೆ.

<table>
<tr><th>PERIOD</th><th>Projects</th><th>Investment (Rs. in cr)</th><th>Employ-ment</th></tr>
<tr><td>2019-20</td><td>219</td><td>35,107.8</td><td>99,644</td></tr>
<tr><td>2020-21</td><td>316</td><td>52,734.76</td><td>1,11,603</td></tr>
<tr><td>2021-22 (till date)</td><td>291</td><td>26,408.34</td><td>77,723</td></tr>
</table>

</td>
</tr>
<tr>
<td>(ಆ)</td>
<td>ಮೇಲ್ಕಂಡ ಕಾರ್ಯಕ್ರಮಗಳು/ ಯೋಜನೆಗಳಿಂದ ಉಂಟಾದ ಉದ್ಯೋಗಾವಕಾಶಗಳ ಸಂಖ್ಯೆ ಮತ್ತು ಅದರ ಫಲಾನುಭವಿಗಳ ಸಂಖ್ಯೆ ಎಷ್ಟು (ಜಿಲ್ಲಾವಾರು ಮಾಹಿತಿ ನೀಡುವುದು)</td>
<td>

ಕಳೆದ 3 ವರ್ಷಗಳಲ್ಲಿ ಎಂಎಸ್ಎಂಇ ಕೈಗಾರಿಕಾ ಘಟಕಗಳ ಸ್ಥಾಪನೆ, ಹೂಡಿರುವ ಬಂಡವಾಳ ಹಾಗೂ ದೊರಕಿರುವ ಉದ್ಯೋಗಗಳ ಜಿಲ್ಲಾವಾರು ಮಾಹಿತಿಯನ್ನು **ಅನುಬಂಧ–1** ರಲ್ಲಿ ನೀಡಲಾಗಿದೆ.

ಕಳೆದ 3 ವರ್ಷಗಳಲ್ಲಿ ರಾಜ್ಯದಲ್ಲಿ 95 ಬೃಹತ್ ಕೈಗಾರಿಕೆಗಳು ಅನುಷ್ಠಾನಗೊಂಡಿದ್ದು, ಇವುಗಳಿಂದ ರೂ. 25253.40 ಕೋಟಿ ಬಂಡವಾಳ ಹೂಡಿಕೆಯಾಗಿರುತ್ತದೆ ಹಾಗೂ 1,16,151 ಜನರಿಗೆ ಉದ್ಯೋಗವಕಾಶ ದೊರೆತಿದೆ. ಜಿಲ್ಲಾವಾರು ಮಾಹಿತಿಯನ್ನು **ಅನುಬಂಧ–2** ರಲ್ಲಿ ನೀಡಲಾಗಿದೆ.

</td>
</tr>
<tr>
<td>(ಇ)</td>
<td>ಸರ್ಕಾರವು ಮೇಕ್ ಇನ್ ಇಂಡಿಯಾ ಕಾರ್ಯಕ್ರಮದ ಅಡಿಯಲ್ಲಿ ಗುರಿಗಳನ್ನು ಸಾಧಿಸಿದೆಯೇ: ಹಾಗಿದ್ದಲ್ಲಿ, ಅದರ ವಿವರಗಳನ್ನು ನೀಡುವುದು: ಇಲ್ಲದಿದ್ದಲ್ಲಿ ಅದಕ್ಕೆ</td>
<td>ಕೇಂದ್ರ ಸರ್ಕಾರದ ಮೇಕ್ ಇನ್ ಇಂಡಿಯಾ ಕಾರ್ಯಕ್ರಮದಡಿಯಲ್ಲಿ ಜಿಡಿಪಿಯಲ್ಲಿ Manufacturing ಪಾಲು 2014ನೇ ಸಾಲಿನಲ್ಲಿದ್ದ ಶೇ. 16 ರಿಂದ ಶೇ. 25ಕ್ಕೆ ಹೆಚ್ಚಿಸುವ ಗುರಿ ಹೊಂದಲಾಗಿತ್ತು ಹಾಗೂ ಹೆಚ್ಚುವರಿ ಉದ್ಯೋಗಾವಕಾಶಗಳನ್ನು ಸೃಜಿಸುವುದಾಗಿತ್ತು.</td>
</tr>
</table>

	ಕಾರಣಗಳೇನು?	ಜಾಗತಿಕ ಆರ್ಥಿಕ ಕುಸಿತ, ಬೇಡಿಕೆ ಇಲ್ಲದಿರುವುದು ಹಾಗೂ ಕೋವಿಡ್–19 ಸಾಂಕ್ರಾಮಿಕ ರೋಗದಿಂದ ಉತ್ಪಾದನಾ ಚಟುವಟಿಕೆಗಳು ಕಡಿಮೆಯಾಗಿದ್ದು, ಭಾರತದ ಜಿಡಿಪಿಯಲ್ಲಿ Manufacturing ಪಾಲನ್ನು ಹೆಚ್ಚಿಸಲು ಸಾಧ್ಯವಾಗಿರುವುದಿಲ್ಲ ಹಾಗೂ 2020–21ನೇ ಸಾಲಿನಲ್ಲಿ ಶೇ. 17 ರಷ್ಟು Manufacturing ಪಾಲು ಇರುತ್ತದೆ.

ಸಿಐ 350 ಎಸ್‌ಪಿಐ 2021

(ಮುರುಗೇಶ್ ಆರ್. ನಿರಾಣಿ)
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು

STARRED LCQ 890

ANNEXURE-1

REGISTRATION OF MSME ENTERPRISES IN KARNATAKA

SL NO	DISTRICT	2018-19			2019-20			2020-21 (Upto June 2020)		
		UNIT In Nos	Invst. Rs. Lakhs	EMP in Nos.	UNIT In Nos	Invst. Rs. Lakhs	EMP in Nos.	UNIT In Nos	Invst. Rs. Lakhs	EMP in Nos.
1	Bagalkote	1,604	21,545	9,078	2,749	34,110	15,233	6,014	33,917	18,287
2	Bellari	943	33,452	9,041	1,477	54,981	13,178	1,982	88,599	17,317
3	Belguam	9,012	101,879	37,058	10,093	120,933	49,147	11,014	114,381	36,363
4	Bangalore (U)	28,287	688,517	308,630	38,708	778,393	336,269	9,829	171,239	54,682
5	Bangalore (R)	4,120	106,836	36,103	5,536	134,368	46,589	25,014	715,534	246,751
6	Bidar	1,260	21,159	9,872	1,216	18,070	6,372	447	9,568	2,656
7	CH Nagar	204	4,458	1,446	458	7,357	2,953	452	6,562	2,423
8	Chikmagalur	519	10,102	3,095	750	13,724	4,171	745	20,990	3,726
9	Chikkaballapur	433	10,028	3,054	819	15,534	4,943	503	12,284	2,750
10	Chitradurga	486	18,747	4,650	717	15,340	5,833	1,119	30,231	5,829
11	D.Kannada	3,035	50,240	19,117	3,709	64,211	23,577	1,534	41,823	11,891
12	Davangere	877	22,587	6,926	1,227	26,259	8,123	1,915	43,421	9,721
13	Dharwad	4,177	56,494	22,672	5,728	84,794	32,780	4,146	71,018	20,950
14	Gadag	699	7,558	3,300	1,128	9,508	4,327	910	13,378	4,639
15	Hassan	580	14,817	5,732	1,145	24,999	7,368	915	21,111	4,718
16	Haveri	671	7,200	3,182	1,162	17,162	5,254	1,198	19,194	7,224
17	Kalaburgai	689	18,838	6,866	1,441	40,850	10,226	894	19,065	5,566
18	Kodagu	272	5,414	1,612	467	7,784	2,494	243	7,466	1,398
19	Kolar	522	21,308	5,320	917	30,580	7,954	729	26,522	5,942
20	Koppal	241	7,343	1,551	498	13,203	3,694	723	34,133	5,087
21	Mandya	424	11,060	4,493	850	19,287	5,432	1,130	21,088	5,380
22	Mysuru	2,452	63,466	21,920	4,161	70,363	24,081	2,543	60,255	17,074
23	Raichur	584	19,578	4,511	903	28,702	9,972	631	35,465	4,104
24	Ramanagara	571	15,710	5,633	979	30,742	7,795	650	27,019	4,535
25	Shivamogga	862	18,059	6,011	1,323	22,790	8,258	975	25,828	7,046
26	Tumukuru	1,437	51,694	12,053	2,085	63,863	16,777	2,824	69,943	17,409
27	Udupi	1,638	33,825	10,561	2,099	40,049	13,348	811	26,927	7,218
28	U.Kannada	1,138	19,143	7,983	2,003	24,764	8,465	824	12,084	4,495
29	Vijapura	1,323	20,544	9,751	2,406	39,300	15,303	1,237	25,650	6,320
30	Yadgir	218	6,097	1,722	478	7,707	2,409	276	3,747	1,389
Total		**69,278**	**1,487,698**	**582,943**	**97,232**	**1,859,727**	**702,325**	**82,227**	**1,808,442**	**542,890**

STARRED LCQ 890

ANNEXURE-2

ರಾಜ್ಯದಲ್ಲಿ 2018-19 ರಿಂದ 2020-21 ಸಾಲಿನವರೆಗೆ ಹೂಡಿಕೆ ಮಾಡಿರುವ ಬೃಹತ್ ಕೈಗಾರಿಕೆಗಳ ವಿವರ

ಕ್ರಮ ಸಂಖ್ಯೆ	ಜಿಲ್ಲೆ	ಘಟಕಗಳ ಸಂಖ್ಯೆ	ಬಂಡವಾಳ ಹೂಡಿಕೆ ಮೊತ್ತ (ರೂ.ಕೋಟಿಗಳಲ್ಲಿ)	ಉದ್ಯೋಗದ ವಿವರಗಳು
1	**2**	**3**	**4**	**5**
1	Bengaluru Urban	40	7784.67	70688
2	Bengaluru Rural	8	693.5	1010
3	Bagalakote	2	427.53	736
4	Bellary	3	546.00	448
5	Belagavi	3	2792.30	2364
6	Chikkaballapura	2	82.00	620
7	Chamarajanagar	1	35	40
8	Dharwad	4	5121.50	22137
9	Dakshina Kannada	3	366.02	800
10	Gadag	1	8.13	30
11	Koppal	2	100.10	240
12	Kolar	9	1800.00	10048
13	Mysuru	13	4950.90	2535
14	Mandya	3	485.00	4425
15	Shivamogga	1	60.75	30
	TOTAL	**95**	**25253.40**	**116151**